20.	Construction of gallery at Sahukar Channaiah Wrestling stadium, Mysore.	M.D. Chandrasekar No. 527, Theobald Road, Nazrbad Mysore	14.50	18,84,494/-
21.	Improvements to existing in seating arrangements providing chain links, mesh fencing to Sahukar Channiah Wrestling Stadium Construction of arch gate & steps, Mysore.	P. Damodharraju No. 1577, New 3611 11th Mn. Road, 36th Cross 4th Block, Jayanagar, Bangalore-4.	11.50	15,52,263/-
22.	Temporary works (viz., water supply, electy & Sound System etc) Kusti Akhada, Mysore.	This is a temporary work and will be taken up at the time of conduction the games.	2.00	-
23.	Improvements to existing toilet of pavilion building at Maharaja's College ground, Mysore.	This is a temporary work and will be taken up at the time of conducting the games.	1.50	-
24.	Misc. works such as masonary drain at Kusti Akhada, Mysore	This is a temporary work and will be taken up at the time of conducting the games.	1.10-	-

ಗೋಕಾಕ್ ತಾಲ್ಲೂಕಿನ ಶಿಂಗಳಾಪುರ ಗ್ರಾಮಕ್ಕೆ ಘಟಪ್ರಭಾ ನದಿಗೆ ತೂಗು ಸೇತುವೆ ನಿರ್ಮಾಣ

2066 - ಶ್ರೀ ಚಂದ್ರಶೇಖರ ನಾಯಕ (ಗೋಕಾಕ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ ತಾಲ್ಲೂಕಿನ ಶಿಂಗಳಾಪುರ ಗ್ರಾಮಕ್ಕೆ ಗೋಕಾಕ ನಗರಕ್ಕೆ ಸಂಪರ್ಕ ಕಲ್ಪಿಸಲು ಘಟಪ್ರಭಾ ನದಿಗೆ ಒಂದು ತೂಗು ಸೇತುವೆ ಅವಶ್ಯವಾಗಿದೆ ಎಂಬುದರ ವಿಷಯ ನಿಜವೇ?

ಆ) ಘಟಪ್ರಭಾ ನದಿಗೆ ಮಹಾಪೂರ ಬಂದಾಗ ಶಿಂಗಳಾಪೂರ ಸಹ ನೀರಿನಿಂದ ಸುತ್ತುವರಿಯುತ್ತದೆ ನಿಜವೇ?

ಇ) ಸದಾಕಾಲ 20 ಕಿಮೀ. ಸುತ್ತಿ ಗೋಕಾಕ ನಗರಕ್ಕೆ ಬರಬೇಕಾದ ಪರಿಸ್ಥಿತಿ ಇರುವಾಗ ತೂಗು ಸೇತುವೆಯಿಂದ ಕೇವಲ 1 ಕಿಮೀ.ದಲ್ಲಿ ಗೋಕಾಕ

ನಗರಕ್ಕೆ ತಲುಪುವ ಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಲು ಸದರಿ ತೂಗು ಸೇತುವೆಯನ್ನು ನಿರ್ಮಿಸಲು ಸರ್ಕಾರದವರು ಕೂಡಲೇ ಕ್ರಮ ಕೈಕೊಳ್ಳುವರೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು

ಆ) ಹೌದು

ಇ) ಸೇತುವೆ ನಿರ್ಮಿಸಲು ಸುಮಾರು 1.2 ಕೋಟಿ ರೂ. ಬೇಕಾಗುತ್ತಿದ್ದು ಪರಿಶೀಲಿಸಲಾಗುವುದು.

ಪಾನನಿಷೇಧ.

2238 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾನನಿಷೇಧ ಮಾಡುವುದಾಗಿ ಸರ್ಕಾರ ಪದೇ ಪದೇ ಹೇಳುತ್ತಿದ್ದರು ಇದನ್ನು ನಿಷೇಧ ಮಾಡದಿರಲು ಕಾರಣಗಳೇನು?

ಆ) ಪಾನ ನಿಷೇಧ ಮಾಡಿದರೆ ಸರ್ಕಾರಕ್ಕಾಗುವ ತೊಂದರೆಗಳೇನು?

ಇ) ರಾಜ್ಯದ ಗಡಿ ಜಿಲ್ಲೆಗಳಿಂದ ಹೊರ ರಾಜ್ಯಗಳಿಗೆ ಮದ್ಯ ಅಕ್ರಮ ಸಾಗಾಣಿಕೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಅಕ್ರಮ ಮಾರಾಟವನ್ನು ತಡೆಗಟ್ಟಲು ಸರ್ಕಾರವು ಏನು ಕ್ರಮ ಕೈಗೊಂಡಿದೆ?

ಶ್ರೀ ಕೆ.ಬಿ. ಶಾಣಪ್ಪ (ಅಬಕಾರಿ ಸಚಿವರು) :

ಅ) ರಾಜ್ಯದಲ್ಲಿ ಪಾನ ನಿಷೇಧವನ್ನು ಜಾರಿಗೆ ತರುವುದರಿಂದ ಉಂಟಾಗುವ ಸಾಧಕ ಬಾಧಕಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಸಚಿವ ಸಂಪುಟದ ಉಪ ಸಮಿತಿಯನ್ನು ನೇಮಿಸಲಾಗಿದ್ದು ಸದರಿ ಸಮಿತಿಯು ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಮಾರ್ಚ್ ತಿಂಗಳಲ್ಲಿ ಲೋಕ ಸಭಾ ಚುನಾವಣೆಗಳನ್ನು ಘೋಷಿಸಲಾದ್ದರಿಂದ ಮತ್ತು ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದ್ದರಿಂದ ಯಾವುದೇ ಹೊಸ ನೀತಿಯ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದನ್ನು ತಡೆಹಿಡಿಯಲಾಯಿತು. ಅಲ್ಲದೆ ಸಚಿವ ಸಂಪುಟವು ಪುನರ್ ರಚನೆಯಾದ ಹಿನ್ನೆಲೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನೂ ಸಹ ದಿನಾಂಕ 14-6-96 ರಂದು ಪುನರ್ ರಚಿಸಲಾಗಿದೆ. ಈ ಪುನರ್ ರಚಿತ ಉಪ ಸಮಿತಿಯು ಈ ವಿಷಯವನ್ನು ಪರಿಶೀಲಿಸುತ್ತಿದೆ. ಸಚಿವ ಸಂಪುಟದ ಉಪ ಸಮಿತಿಯು ನೀಡುವ ವರದಿಯ ಆಧಾರದ ಮೇಲೆ ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು.

ಆ) ಪಾನ ನಿಷೇಧ ಜಾರಿಗೆ ತರುವುದರಿಂದ ಉಂಟಾಗುವ ಸಾಧಕ ಬಾಧಕಗಳನ್ನೂ ಸಹ ಸಚಿವ ಸಂಪುಟದ ಉಪ ಸಮತಿಯು ಪರಿಶೀಲಿಸುತ್ತಿದೆ.

ಇ) ಅಂತಹ ಅಕ್ರಮ ಮದ್ಯ ಸಾಗಾಣಿಕೆಯು ಗಮನಕ್ಕೆ ಬಂದಾಗ ಮದ್ಯವನ್ನು ಮತ್ತು ವಾಹನವನ್ನು ಜಪ್ತಿ ಮಾಡಲು ಮತ್ತು ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಅಂತಹ ಅಪರಾಧಿಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗಿದೆ.